

# ಕಾರ್ತವೀರ್ಯಾರ್ಜುನ

ಕಥೆ: ಗುರುದಾಸ್ ಚಿತ್ರ : ಎಸ್. ರವಿ

1 ನರ್ಮದಾ ತೀರದಲ್ಲಿರುವ ಹೇಹಯ ರಾಜ್ಯದ ರಾಜಧಾನಿ ಮಾಹಿಷ್ಮತಿ. ಅಲ್ಲಿ ಕಾರ್ತವೀರ್ಯನು ರಾಜ್ಯವಾಳುತ್ತಿದ್ದನು. ಸಂತತಿಗಾಗಿ ಅವನು ದತ್ತಾತ್ರೇಯನನ್ನು ಪ್ರಾರ್ಥಿಸಿದನು.





2 ಹೀಗೆ ಜನಿಸಿದ ಮಗುವಿಗೆ ಕಾರ್ತವೀರ್ಯಾರ್ಜುನ ಎಂದು ಹೆಸರಿಟ್ಟನು. ಅವನು ತನ್ನ ಕುಲಗುರುವಾದ ಗರ್ಗಮುನಿಗಳ ಬಳಿ ವಿದ್ಯಾಭ್ಯಾಸ ಮಾಡಿದನು.




3 ಕಾರ್ತವೀರ್ಯನು ದತ್ತಾತ್ರೇಯ ಮಹರ್ಷಿಗಳಿಗೆ ನಾನಾ ಬಗೆಯ ಸೇವೆಗಳನ್ನು ಮಾಡುತ್ತ ಬಂದ. ಒಂದು ದಿನ ಕಾರ್ತವೀರ್ಯನು ಅವರ ಪಾದಸೇವೆ ಮಾಡುತ್ತಾ ಇದ್ದಾಗ ದತ್ತಾತ್ರೇಯರು ನಿದ್ರಿಸುತ್ತಿದ್ದರು. ಆಗ.....






4 ಗುರು ದತ್ತಾತ್ರೇಯರು ಕಣ್ಣು ಬಿಟ್ಟು ನೋಡಿದರು.




5
ಗುರುಗಳೇ, ನಿಮ್ಮ ಪೂರ್ಣ ಆಶೀರ್ವಾದ ನನ್ನ ಮೇಲೆ ಸದಾ ಇರಲಿ.
ಮಗೂ, ನಿನ್ನ ಸೇವೆಗೆ ಮೆಚ್ಚಿ ನಾನು ಈ ವರಗಳನ್ನು ನೀಡಿದ್ದೇನೆ. ಅವುಗಳನ್ನು ನೀನು ಧರ್ಮಕ್ಕನುಗುಣವಾಗಿ ಬಳಸಿದರೆ, ನಿನಗೇನೂ ಹಾನಿಯುಂಟಾಗದು.
6
ಕಾರ್ತವೀರ್ಯಾರ್ಜುನನು ಭೂಲೋಕ, ಸ್ವರ್ಗಲೋಕಗಳನ್ನು ಗೆದ್ದು ಚಕ್ರವರ್ತಿಯಾದನು. ಅವನು ಯಾರೂ ಸೋಲಿಸಲಾಗದ ಮಹಾಪರಾಕ್ರಮಿಯಾದನು. ಆದರೆ ಅವನು ಕ್ರಮೇಣ ಮದ್ಯಪಾನಕ್ಕೆ ವಶನಾಗಿ, ನಿಗ್ರಹವನ್ನು ಕಳೆದುಕೊಂಡ. ಅದರಿಂದಾಗಿ ಅನೇಕ ಮಂದಿ ಉತ್ತಮರು ನರಳುವಂತಾಯಿತು.
ಇಡೀ ಜಗತ್ತಿನಲ್ಲಿ ನನಗೆ ಸಮಾನರಾದವರು ಯಾರಾದರೂ ಇದ್ದಾರೆಯೆ? ಅದನ್ನು ನೋಡೋಣ.
7
ಮಂತ್ರಿಗಳೇ, ಈ ಜಗತ್ತಿನಲ್ಲಿ ನನಗೆ ಎಣೆ ಯಾರಿದ್ದಾರೆ? ಎಲ್ಲೆಡೆ ಹುಡುಕಿ ನೋಡಿ.
ಓ ರಾಜಾಧಿರಾಜನೇ, ನಮಗೆ ತಿಳಿದಿರುವಂತೆ ನಿಮಗೆಣೆ ಯಾರೂ ಇಲ್ಲ. ವರುಣದೇವನು ಜಗತ್ತನ್ನೆಲ್ಲ ಸುತ್ತು ಹಾಕಿ ಬರುತ್ತಾನೆ. ಅವನನ್ನು ಕೇಳಿದರೆ ಇದಕ್ಕೆ ಉತ್ತರ ಸಿಗಬಹುದು.
8
ಓ ವರುಣದೇವ, ನನಗೆ ಸಮಾನರು ಇಡೀ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೆ?
ಹೌದು, ಇದ್ದಾರೆ ಕಾರ್ತವೀರ್ಯ. ಜಮದಗ್ನಿ ಮುನಿಗಳ ಮಗ ಪರಶುರಾಮನು ಮಾತ್ರವೇ ನಿಮಗಿಂತ ಶಕ್ತಿಶಾಲಿಯಾದವನು.


9
ಕಾರ್ತವೀರ್ಯನು ಜಮದಗ್ನಿ ಮಹರ್ಷಿಗಳ ಆಶ್ರಮಕ್ಕೆ ತನ್ನ ಸೈನ್ಯದೊಂದಿಗೆ ಹೋಗಿ, ಪರಶುರಾಮನಿಗಾಗಿ ಹುಡುಕಾಡಿದ. ಆಗ ಪರಶುರಾಮ ಕಾಡಿಗೆ ಹೋಗಿದ್ದ.
ಮಹಾರಾಜ, ಪರಶುರಾಮ ಇಲ್ಲಿಲ್ಲ. ಆದರೆ ಬಯಸಿದ್ದನ್ನೆಲ್ಲ ಕೊಡುವ ಕಾಮಧೇನು ಆಶ್ರಮದಲ್ಲಿದೆ. ಅದನ್ನು ನೀನು ಪಡೆದರೆ ನಿನಗೆ ಒಳಿತಾಗುವುದು.
ಸರಿ, ಅದನ್ನೇ ಮಾಡೋಣ.
10
ಮಹರ್ಷಿಗಳೆ, ಬಯಸಿದ್ದನ್ನೆಲ್ಲ ನೀಡುವ ಕಾಮಧೇನು ನಿಮ್ಮ ಆಶ್ರಮಕ್ಕೆ ಏಕೆ ಬೇಕು? ಅದು ನನ್ನ ಬಳಿ ಇದ್ದರೆ ತುಂಬಾ ಒಳ್ಳೆಯದು.
ಕಾರ್ತವೀರ್ಯ, ಅದನ್ನು ನನಗೆ ಇಂದ್ರನೇ ಕಾಣಿಕೆಯಾಗಿ ಕೊಟ್ಟಿದ್ದಾನೆ. ಕಾಣಿಕೆಯಾಗಿ ಕೊಟ್ಟ ವಸ್ತುವನ್ನು ಬೇರೆಯವರಿಗೆ ಕೊಡಬಾರದು.
11
ಕಾರ್ತವೀರ್ಯನು ಕಾಮಧೇನುವನ್ನು ಅಪಹರಿಸಿದ್ದಲ್ಲದೆ, ಆಶ್ರಮವನ್ನೆಲ್ಲ ಧೂಳೀಪಟ ಮಾಡಿ ಹೋದ. ಕಾಡಿನಿಂದ ಮರಳಿದ ಪರಶುರಾಮನು ಆಶ್ರಮದ ಅವಸ್ಥೆಯೆನ್ನೆಲ್ಲ ನೋಡಿದ.
ಮಗನೇ, ಕಾರ್ತವೀರ್ಯನು ನಿನಗಾಗಿ ಹುಡುಕುತ್ತ ಬಂದ. ಬಳಿಕ ಕಾಮಧೇನುವನ್ನು ಅಪಹರಿಸಿ ತೆಗೆದುಕೊಂಡು ಹೋದ.
12
ಅಪ್ಪಾ, ನಾನು ಕಾರ್ತವೀರ್ಯನಿಂದ ಕಾಮಧೇನುವನ್ನು ಬಿಡಿಸಿ ತರುತ್ತೇನೆ.




ನಾವು ಒಳ್ಳೆಯದನ್ನು ಮಾಡೋಣ. ಏಕೆಂದರೆ, ಒಳ್ಳೆಯದನ್ನು ಮಾಡುವುದು ಒಳ್ಳೆಯದು. ಸ್ವಾರ್ಥದ ಮೂಲಕ ಮಾಡುವ ಕರ್ಮ ನಮ್ಮನ್ನು ಮುಕ್ತರನ್ನಾಗಿಸುವುದಕ್ಕೆ ಬದಲಾಗಿ ನಮ್ಮ ಕಾಲುಗಳಿಗೆ ಮತ್ತೊಂದು ಸಂಕೋಲೆಯನ್ನು ತೊಡಿಸುತ್ತದೆ.

– ಸ್ವಾಮಿ ವಿವೇಕಾನಂದ

